ಮಹಿಳಾದಿನ
ವಿಶೇಷ

# ಕಥಕ್ ದೀಕ್ಷೆ ಸೌಂದರ್ಯ ಸಮೀಕ್ಷೆ



ಕಥಕ್, ಮಾಡೆಲಿಂಗ್, ಸೌಂದರ್ಯ ಸ್ಪರ್ಧೆ – ಹೀಗೆ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿರುವ ಸಿಮ್ರನ್ ಗೋಧ್ವಾನಿ, 2018ರ ನವೆಂಬರ್‌ನಲ್ಲಿ ಪೋರ್ಚುಗಲ್‌ನಲ್ಲಿ ನಡೆದ ‘ಮಿಸ್ ಸ್ಟಾರ್ ಯುನಿವರ್ಸ್’ ಸೌಂದರ್ಯ ಸ್ಪರ್ಧೆಯಲ್ಲಿ ಮೊದಲಿಗರಾಗಿ ಕಿರೀಟ ಧರಿಸಿದ್ದರು. ‘ಮಹಿಳಾ ದಿನ’ದ ಸಂದರ್ಭದಲ್ಲಿ ಅವರನ್ನು **ಉಮಾ ಅನಂತ್** ಮಾತನಾಡಿಸಿದ್ದಾರೆ.

ತಬಲಾದ ‘ಧಾ ಧಿನ್ ಧಿನ್ ಧಾ...’ ಬೋಲ್‌ಗಳ ಕ್ರಮಬದ್ಧ ಲಯದ ಆಧಾರದ ಮೇಲೆ ನೃತ್ಯ, ಭಾವ ಅಭಿನಯಗಳ ಸೃಜನಶೀಲ ಅಭಿವ್ಯಕ್ತಿ ಕಥಕ್ ನೃತ್ಯ ಪ್ರಕಾರದ ವೈಶಿಷ್ಟ್ಯ. ಸ್ಥೂಲಾರ್ಥದಲ್ಲಿ ಕಥಕ್ ಎಂದರೆ ಕಥೆ ಹೇಳುವುದು. ಸಾಂಪ್ರದಾಯಿಕವಾಗಿ ಕಥಕ್‌ನಲ್ಲಿ ಲಯದ ತೀನ್‌ತಾಲ್‌ದ್ದೇ ಮಹತ್ವದ ಸ್ಥಾನ. ಆದರೆ ತಾಳದ ಮಾಮೂಲಿ ಬೋಲ್‌ಗಳ ಜತೆಗೆ ತಿಹಾಯಿ ರಚನೆಯನ್ನು ಉಸಿರು ಬಿಡದೆ ಹೇಳುತ್ತಾ ಕಾಲಚಕ್ರದ (ಸ್ಪಿನ್) ಮೇಲೆಯೂ ಹಿಡಿತ ಸಾಧಿಸಲು ಅಸಾಧಾರಣ ಪರಿಶ್ರಮ ಬೇಕು. ಇದು ಸತತ ಅಭ್ಯಾಸ, ನಿರಂತರ ಶ್ರದ್ಧೆ ಬಯಸುತ್ತದೆ. ಕಥಕ್‌ನಲ್ಲಿ ಸಂಗೀತ, ಲಯ, ಭಾವ, ಅಭಿನಯ ಎಲ್ಲವೂ ಏಕಕಾಲಕ್ಕೆ ಅನಾವರಣಗೊಳ್ಳಬೇಕು. ಇವೆಲ್ಲವನ್ನೂ ಸಾಧಿಸಿದವರು ಕಲಾವಿದೆ ಸಿಮ್ರನ್ ಗೋಧ್ವಾನಿ.

ಬೆಂಗಳೂರಿನ ಕೋರಮಂಗಲದಲ್ಲಿರುವ ‘ಕೃಶಲ ಡ್ಯಾನ್ಸ್ ಥಿಯೇಟರ್’ನಲ್ಲಿ ಕಲಾ ನಿರ್ದೇಶಕಿಯಾಗಿರುವ ಸಿಮ್ರನ್, ನೃತ್ಯದೊಂದಿಗೆ ಮಾಡೆಲಿಂಗ್‌ನಲ್ಲೂ ಆಸಕ್ತಿ ಹೊಂದಿರುವವರು. ಖ್ಯಾತ ಕಥಕ್ ನೃತ್ಯ ಪಟು ಮುರಾರಿ ಶರಣ ಗುಪ್ತ ಅವರ ಬಳಿ 15 ವರ್ಷಗಳ ಕಾಲ ಕಥಕ್ ಅಭ್ಯಾಸ ಮಾಡಿದ ಬಳಿಕ, ವಿಶ್ವವಿಖ್ಯಾತ ನೃತ್ಯದಿಗ್ಗಜ ಪಂ. ಬಿರ್ಜು ಮಹಾರಾಜ್ ಅವರ ಬಳಿ ಹೆಚ್ಚಿನ ನೃತ್ಯ ಮಾರ್ಗದರ್ಶನವನ್ನು ಪಡೆದವರು. ಬೆಂಗಳೂರಿನಲ್ಲಿ ಹುಟ್ಟಿ, ಲಂಡನ್ ಮತ್ತು ದುಬೈಗಳಲ್ಲಿ ಬೆಳೆದ ಸಿಮ್ರನ್, ಬೆಂಗಳೂರು ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದು ಐದು ವರ್ಷ ಐಟಿ ಕಂಪೆನಿಯಲ್ಲಿ ಕೆಲಸ ಮಾಡಿದವರು.

ದೇಶ ವಿದೇಶಗಳ ಅನೇಕ ಪ್ರತಿಷ್ಠಿತ ನೃತ್ಯೋತ್ಸವಗಳಲ್ಲಿ ಭಾಗವಹಿಸಿದ ಹೆಗ್ಗಳಿಕೆಯೂ ಇವರ ಬೆನ್ನಿಗಿದೆ. ಶ್ರೀಕೃಷ್ಣನಿಗೆ ಸಂಬಂಧಿಸಿದ ನೃತ್ಯ ರೂಪಕಗಳಾದ ರಾಧಾ, ಯಶೋದಾ, ಬಾನ್ಸುರಿಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಅವರೊಂದಿಗಿನ ಮಾತುಕತೆಯ ಅಕ್ಷರರೂಪ ಇಲ್ಲಿದೆ.

◆ ಸೃಜನಶೀಲ ಕಲೆ, ಸಂಗೀತ–ನೃತ್ಯದಲ್ಲಿ ಕೌಟುಂಬಿಕ ಹಿನ್ನೆಲೆ ಏನಾದರೂ ಇದೆಯೇ?

ಮನೆಯಲ್ಲಿ ಸಂಗೀತ–ನೃತ್ಯದ ಹಿನ್ನೆಲೆ ಇಲ್ಲ. ಕಥಕ್‌ನಲ್ಲಿ ಆಸಕ್ತಿ ಹುಟ್ಟಲು ಹಾಗೂ ಕಥಕ್ ಕಲಿಯಲು ಪ್ರೇರಣೆ ನೀಡಿದ್ದು ಶ್ರೀಕೃಷ್ಣನ ಕಥಾನಕವನ್ನು ಕೇಳಿದ ಬಳಿಕ. ಅದಕ್ಕೂ ಮೊದಲೇ ನಾನು ಐದು ವರ್ಷದವಳಿರುವಾಗಲೇ ಕಥಕ್ ನೃತ್ಯದತ್ತ ಆಕರ್ಷಿತಳಾಗಿ ಅದನ್ನು ಕಲಿಯಲಾರಂಭಿಸಿದೆ. ನನ್ನ ಕುಟುಂಬದ ಸದಸ್ಯರೆಲ್ಲ ಎಂಜಿನಿಯರ್, ಡಾಕ್ಟರ್ ಆಗಿದ್ದಾರೆ. ಪತಿ ರಾಕೇಶ್ ಗೋಧ್ವಾನಿ ಬೆಂಗಳೂರಿನ ಐಐಎಂಬಿಯಲ್ಲಿ ಪ್ರೊಫೆಸರ್.